KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE : 21/4/21

**ಹೋರಾಟ-ತಿಕ್ಕಾಟ** ಮುಷ್ಕರದಿಂದ ಜನರ ಹಕ್ಕಿಗೆ ಧಕ್ಕೆ, ಚಳವಳಿಗೆ ಇದು ಸಕಾಲವಲ್ಲ: ಕೋರ್ಟ್ | ಆದೇಶ ಪ್ರತಿ ಸಿಕ್ಕಿಲ್ಲ, ಮುಷ್ಕರ ನಿಲ್ಲಲ್ಲ: ಕೋಡಿಹಳ್ಳಿ

# ಮುಷ್ಕರ ಕೈಬಿಟ್ಟು ಬಸ್ ಓಡಿಸಿ: ಹೈಕೋರ್ಟ್ ಸೂಚನೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೊರೋನಾ ಸಂಕಷ್ಟದ ನಡುವೆ ಮುಷ್ಕರ ನಡೆಸುವುದರಿಂದ ಜನರ ಮೂಲಭೂತ ಹಕ್ಕುಗಳಿಗೆ ಧಕ್ಕೆಯಾಗುವ ಜೊತೆ ಸಂಕಷ್ಟ ಎದುರಿಸಬೇಕಾಗುವುದರಿಂದ ತಕ್ಷಣ ಮುಷ್ಕರ ಕೈ ಬಿಟ್ಟು ಸೇವೆ ಆರಂಭಿಸುವಂತೆ ಮುಷ್ಕರ ನಿರತ ಸಾರಿಗೆ ನೌಕರರಿಗೆ ಹೈಕೋರ್ಟ್ ಸೂಚಿಸಿದೆ.

ಹೈಕೋರ್ಟ್ ನೀಡಿರುವ ಸೂಚನೆಗೆ ಪ್ರತಿಕ್ರಿಯಿಸಿರುವ ಸಾರಿಗೆ ನೌಕರರ ಕೂಟದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್, ಹೈಕೋರ್ಟ್ ಯಾವ ಆದೇಶ ನೀಡಿದೆ ಎಂಬುದು ತಮ್ಮ ಗಮನಕ್ಕೆ ಬಂದಿಲ್ಲ. ಆದೇಶದ ಪ್ರತಿ ಸಿಕ್ಕಿಲ್ಲ. ಹೀಗಾಗಿ ಮುಷ್ಕರ ಮುಂದುವರೆಸಲಾಗುವುದು. ನಮ್ಮ ಅಭಿಪ್ರಾಯವನ್ನು ವಕೀಲರ ಮೂಲಕ ಕೋರ್ಟ್ ಗಮನಕ್ಕೆ ತರಲಾಗುವುದು ಎಂದು ಹೇಳಿದ್ದಾರೆ. ನ್ಯಾಯಾಲಯ ನಮ್ಮ ವಾದ ಆಲಿಸಿಲ್ಲ. ಸಾರಿಗೆ ನೌಕರರ ಸಮಸ್ಯೆ ಕೂಲಂಕಷವಾಗಿ ವಿಚಾರಣೆಯಾಗಬೇಕು. ನಮಗೆ ನೌಕರರ ಹಿತಾಸಕ್ತಿ ಮುಖ್ಯ, ಈ ಬಗ್ಗೆ ಕೋರ್ಟ್‌ಗೆ ತಿಳಿಸಲಾಗುವುದು ಎಂದರು.

**ಕೈ ಬಿಡುವ ವಿಶ್ವಾಸವಿದೆ:** ಸಾರಿಗೆ ನೌಕರರ ಮುಷ್ಕರ ತಡೆಯಲು ಸರ್ಕಾರಕ್ಕೆ ನಿರ್ದೇಶಿಸುವಂತೆ ಕೋರಿ ವಕೀಲ ನಟರಾಜ್ ಶರ್ಮಾ ಸೇರಿ ಮತ್ತಿತರರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್.ಓಕ ನೇತೃತ್ವದ ವಿಭಾಗೀಯ ಪೀಠ ಮಂಗಳವಾರ ವಿಚಾರಣೆ ನಡೆಸಿತು. ಈ ವೇಳೆ ವಿಭಾಗೀಯ ಪೀಠ, ಬಸ್‌ಗಳ ಸೇವೆ ವ್ಯತ್ಯಯದಿಂದ ಜನ ಸಾಮಾನ್ಯರಿಗೆ ತೊಂದರೆಯಾಗುತ್ತಿದೆ. ಕೊರೋನಾದಿಂದ ಈಗಾಗಲೇ ಸಂಕಷ್ಟ ಎದುರಾಗಿದೆ. ಲಸಿಕೆ ಕೇಂದ್ರಗಳಿಗೂ ಜನ ತೆರಳಲಾಗುತ್ತಿಲ್ಲ. ಇಂಥ ಸ್ಥಿತಿಯಲ್ಲಿ ಜನರಿಗೆ ಕೈಗೆಟುಕುವ ದರದ ಸರ್ಕಾರಿ ಬಸ್‌ಗಳ ಸೇವೆಯ ಅಗತ್ಯವಿದೆ. ಮುಷ್ಕರ ಮುಂದುವರಿಸಲು ಇದು ಸೂಕ್ತ ಕಾಲವಲ್ಲ, ಇದರಿಂದ ಜನಸಾಮಾನ್ಯರ ಮೂಲಭೂತ ಹಕ್ಕಿಗೆ ಧಕ್ಕೆಯಾಗಲಿದೆ ಎಂದು ಅಭಿಪ್ರಾಯಿಸಿತು.

ನೌಕರರ ಬೇಡಿಕೆ ಕಾನೂನುಬದ್ಧವಾಗಿಯೇ ಇರಬಹುದು. ಆದರೆ, ಪ್ರಸ್ತುತ ಸಾರಿಗೆ ಸೇವೆ ತುರ್ತು ಅಗತ್ಯವಿದ್ದು, ಕೂಡಲೇ ಕಾರ್ಯಾರಂಭಿಸುವುದು ಸೂಕ್ತ ಎಂದು ಅಭಿಪ್ರಾಯಪಟ್ಟು, ಪ್ರಕರಣದ ವಿಚಾರಣೆ ಮುಂದೂಡಿತು.

## ಜೈಲ್ ಭರೋ ಚಳವಳಿ: ಲಾಠಿ ಏಟು

**ಕೋಲಾರ/ಧಾರವಾಡ:** ನಿಷೇಧಾಜ್ಞೆ ನಡುವೆಯೂ ಜೈಲ್ ಭರೋ ಚಳವಳಿಯನ್ನು ನಡೆಸಲು ಮುಂದಾದ ಸಾರಿಗೆ ನೌಕರರ ಮೇಲೆ ಪೊಲೀಸರು ಲಾಠಿ ಪ್ರಹಾರ ಮಾಡಿ, 32 ಜನರನ್ನು ಬಂಧಿಸಿದ ಘಟನೆ ಕೋಲಾರದಲ್ಲಿ ಮಂಗಳವಾರ ನಡೆದಿದ್ದರೆ, ಧಾರವಾಡದಲ್ಲಿ ನೌಕರರನ್ನು ಬಂಧಿಸಿ ಆನಂತರ ಬಿಡುಗಡೆ ಮಾಡಲಾಗಿದೆ.

## ಮತ್ತೆ 7848 ಸಾರಿಗೆ ಬಸ್ ಸಂಚಾರ

**ಬೆಂಗಳೂರು:** ಕರ್ತವ್ಯಕ್ಕೆ ಹಾಜರಾಗದ ಸಾರಿಗೆ ನೌಕರರ ವಿರುದ್ಧ ನಿಗಮಗಳು ಕಾನೂನು ಕ್ರಮ ಮುಂದುವರೆಸುತ್ತಿರುವ ಪರಿಣಾಮ 3 ದಿನಗಳಿಂದ ಕರ್ತವ್ಯಕ್ಕೆ ಹಾಜರಾಗುವವರ ಸಂಖ್ಯೆ ಹೆಚ್ಚಾಗಿದ್ದು, ಮಂಗಳವಾರ ಸಂಜೆ 7ರ ವೇಳೆಗೆ 7848 ಬಸ್‌ಗಳು ಕಾರ್ಯಚರಣೆ ನಡೆಸಿವೆ ಎಂದು ಸಾರಿಗೆ ನಿಗಮಗಳ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಬೆಂಗಳೂರು ನಗರದಲ್ಲಿ ಕೊರೋನಾ ಉಲ್ಬಣಗೊಳ್ಳುತ್ತಿ ರುವುದ ರಿಂದ ಪುನಃ ಲಾಕ್‌ಡೌನ್ ಜಾರಿಯಾಗ ಬಹುದೆಂಬ ಭೀತಿಯಿಂದ ರಾಜ್ಯ ಹಾಗೂ ಹೊರ ಜಿಲ್ಲೆಯ ಜನ ತಮ್ಮೂರಿಗೆ ಮಂಗಳವಾರವೂ ಹೆಚ್ಚಿನ ಸಂಖ್ಯೆಯಲ್ಲಿ ತೆರಳಿದರು.



**187 ನೌಕರರು ವಜಾ:** ಮುಷ್ಕರ ನಿರತ ಸಾರಿಗೆ ನೌಕರರ ವಿರುದ್ಧ ಕಠಿಣ ಕ್ರಮ ಮುಂದುವರೆಸಿರುವ 4 ಸಾರಿಗೆ ನಿಗಮಗಳು, ಮಂಗಳವಾರ ಸೇವೆಗೆ ಹಾಜರಾಗದ ಕಾಯಂ ಸೇವೆಯಲ್ಲಿರುವ 10 ಮಂದಿಯನ್ನು ವಜಾಗೊಳಿಸಿದ್ದು, ತರಬೇತಿಯಲ್ಲಿದ್ದ 177 ನೌಕರರನ್ನು ಸೇವೆಯಿಂದ ತೆಗೆದುಹಾಕಿವೆ. 733 ನೌಕರರಿಗೆ ನೋಟಿಸ್ ಜಾರಿ ಮಾಡಿದೆ.